**ದಿಃ 11.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಪಾಟೀ ಸವಾಲುಃ ಆರೋಪಿ/ಆರೋಪಿಗಳ ಪರ ವಕಿಲರಿಂದಃ**

ನನ್ನ ಸ್ವಂತ ಊರು ಸುಕನಹಳ್ಳಿ, ನನ್ನ ವಿಳಾಸ ಇರುವುದು ಅದೇ ಗ್ರಾಮದಲ್ಲಿ ಅಂದರೆ ಸರಿ. ನಾವು 3 ಜನ ಅಣ್ಣತಮ್ಮಂದಿರು. ದೊಡ್ಡವರು ರವಿಕುಮಾರು ರಮೇಶ ನಾನು. ರವಿಕುಮಾರ ರವರಿಗೆ ಅಭಿಷೇಕ್ ಎಂಬ ಮಗ ಇದ್ದಾರೆ. ನಾನು ವ್ಯವಸಾಯವನ್ನು ಮಾಡುತ್ತೇನೆ. ವ್ಯವಸಾಯವನ್ನು ಸುಕನಹಳ್ಳಿಯಲ್ಲಿ ಮಾಡುತ್ತೇನೆ. ನನ್ನ ಜಮೀನು 4 ಎಕರೆ ಇದೆ. 2011 ರಿಂದ ಆರೋಪಿ ನನಗೆ ಪರಿಚಯ. ಮಂಜುನಾಥರವರು ಬೇಕರಿ ಮಾಡುತ್ತಾರೆ. ಮೊದಲು ಶ್ರವಣಬೆಳಗೊಳದಲ್ಲಿ ಬೇಕರಿ ಮಾಡುತ್ತಿದ್ದರು. ನನಗೂ ಅವರಿಗೂ ಹಲವಾರು ಬಾರಿ ವ್ಯವಹಾರ ಆಗಿರುತ್ತದೆ. ಸಣ್ಣ ಪುಟ್ಟ ಹಣಕಾಸಿನ ವ್ಯವಹಾರ ಆಗಿರುತ್ತದೆ. 2016 ರಲ್ಲಿ ಮಂಜುನಾಥರವರು ಹಣವನ್ನು ಕೇಳಿರುತ್ತಾರೆ. 2,80,000/- ಕೇಳಿರುತ್ತಾರೆ. ಅದು ಯಾವ ದಿನಾಂಕ ಎಂದು ನನಗೆ ಗೊತ್ತಿಲ್ಲ. ನಾನು ಹಣವನ್ನು 2016 ರಲ್ಲಿ ಕೊಟ್ಟಿರುತ್ತೇನೆ. ಯಾವ ದಿನಾಂಕ ಎಂದು ನಿಖರವಾಗಿ ಹೇಳಲು ಸಾಧ್ಯವಿಲ್ಲ. ಮಂಜುನಾಥರವರ ವಿರುದ್ಧ ನನ್ನ ಅಣ್ಣನ ಮಗ ಕೂಡ ಕೇಸನ್ನು ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ಕೇಸಿಗೆ ಸಂಬಂಧಪಟ್ಟಂತೆ ನೋಟಿಸನ್ನು 2017 ರಲ್ಲಿ ದಿನೇಶ್ ವಕೀಲರ ಮೂಲಕ ಕೊಡಿಸಿರುತ್ತೇನೆ. ಅದೇ ವಕೀಲರ ಮೂಲಕ ನನ್ನ ಅಣ್ಣನ ಮಗನೂ ನೋಟಿಸು ಕೊಡಿಸಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ನನಗೂ ನನ್ನ ಅಣ್ಣನ ಜೊತೆ ಮಾತುಕತೆ ಚೆನ್ನಾಗಿರುತ್ತದೆ. ಕೇಸು ಹಾಕಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ನಾನು ಹಣವನ್ನು ಕೊಟ್ಟ ಮೇಲೆ ಒಂದು ಚೆಕ್ಕನ್ನು ಪಡೆದುಕೊಂಡಿರುತ್ತೇನೆ. 2017 ವರ್ಷದ ಚೆಕ್ಕನ್ನು ಕೊಟ್ಟಿರುತ್ತಾರೆ ನಿಖರವಾದ ದಿನಾಂಕ ನೆನಪಿರುವುದಿಲ್ಲ. Corporation bank ನ ಚೆಕ್ ಆಗಿರುತ್ತದೆ. ಚೆಕ್ಕನ್ನು ನಗದೀಕರಣಕ್ಕೆ ಹಾಕಿದಾಗ ಸಾಕಷ್ಟು ಹಣವಿಲ್ಲ ಎಂಬ ಹಿಂಬರಹ ಬಂದಿರುತ್ತದೆ. ನಂತರ ಆರೋಪಿಯನ್ನು ಅಂಗಡಿ ಹತ್ತಿರ ಕೇಳಿರುತ್ತೇನೆ. 2017 ರಲ್ಲಿ ಆರೋಪಿ ಬೇಕರಿಯನ್ನು ಮುಚ್ಚಿ

ಬೆಂಗಳೂರಿನಲ್ಲಿ ವಾಸವಾಗಿರುತ್ತಾರೆ. ಆದರೆ ಅವರು ವಿಜಿಪುರದಲ್ಲಿರುತ್ತಾರೆ. ಈ ಮೊತ್ತಕ್ಕೆ ಬಡ್ಡಿಯ ಬಗ್ಗೆ ಮಾತುಕತೆ ಆಗಿರುವುದಿಲ್ಲ. ನನ್ನದು ಖಾತೆ corporation, SBI ಅಲ್ಲಿ ಇರುತ್ತದೆ. SBI ಖಾತೆಯ ಫೋನ್ ಪೇ ಇರುತ್ತದೆ. ಸದರಿ ಎರಡು ಖಾತೆಗಳ ಪಾಸ್ ಪುಸ್ತಕ ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇರುವುದಿಲ್ಲ. ಆರೋಪಿಯು ಹಣವನ್ನು ಕೊಡುವುದೇ ಇಲ್ಲ ಎಂದಾಗ ಚೆಕ್ಕನ್ನು ನಗದೀಕರಣಕ್ಕೆ ಹಾಕಿರುತ್ತೇನೆ. ಚೆಕ್ ಹಾಕಿದ ಮೇಲೆ ಆರೋಪಿಯನ್ನು ಹಣವನ್ನು ಕೇಳಿರುತ್ತೇನೆ ಆದರೆ ಆರೋಪಿ ಕೊಟ್ಟಿರುವುದಿಲ್ಲ. ದೂರನ್ನು ಯಾವ ವರ್ಷದಂದು ದಾಖಲಾತಿ ಮಾಡಿಸಿರುತ್ತೇನೆ ಎಂದು ನನಗೆ ನೆನಪಿರುವುದಿಲ್ಲ. ತಿಳುವಚಿಕೆ ಪತ್ರವನ್ನು ಕೊಟ್ಟಿರುತ್ತೇನೆ. ಆರೋಪಿ ಹಣವನ್ನು ನನ್ನ ಬ್ಯಾಂಕ್ ಖಾತೆಗೆ ಹಾಕಿರುತ್ತಾರೆ ಎಂದರೆ ಈ ಕೇಸಿಗೆ ಸಂಬಂಧಪಟ್ಟಂತೆ ಹಾಕಿರುವುದಿಲ್ಲ ಎಂದು ಹೇಳುತ್ತಾರೆ. ಈ ಕೇಸು ಹಾಕಿದ ನಂತರ 25ಸಾವಿರ ರೂಗಳನ್ನು ಎರಡು ಬಾರಿ ನನ್ನ ಖಾತೆಗೆ ಹಾಕಿರುತ್ತಾರೆ. SBI  ಖಾತೆಗೆ ಹಾಕಿರುತ್ತಾರೆ. ತಿಳುವಳಿಕೆ ಪತ್ರ ಕೊಟ್ಟನಂತರ ಹಣವನ್ನು ಹಾಕಿರುತ್ತಾರೆ. ಇದರ ಬಗ್ಗೆ ಪಿರ್ಯಾದಿನಲ್ಲಿ ನಮೂದು ಮಾಡಿರುವುದಿಲ್ಲ. ಯಾವಾಯಾವ ದಿನಾಂಕದಂದು 25 ಸಾವಿರ ಹಣವನ್ನು ನನ್ನ ಖಾತೆಗೆ ಹಾಕಿರುತ್ತಾರೆ ಎಂದು ಹೇಳಲು ನೆನಪಾಗುತ್ತಿಲ್ಲ. ನನ್ನ ಮುಂದೆನೆ ಚೆಕ್ಕನ್ನು ಆರೋಪಿ ಬರೆದುಕೊಟ್ಟಿರುತ್ತಾರೆ, ನಾನು ಹಣವನ್ನು ಶ್ರವಣಬೆಳಗೊಳದ ಆರೋಪಿಯ ಅಂಗಡಿಯಲ್ಲಿ ಕೊಟ್ಟಿರುತ್ತೇನೆ. ಎಲ್ಲಾ ಹಣವನ್ನು ನಗದು ರೂಪದಲ್ಲಿ ಕೊಟ್ಟಿರುತ್ತೇನೆ, ಎಲ್ಲಾ 500 ರೂ ನೋಟುಗಳಾಗಿರುತ್ತವೆ. ನಾನು ಆರೋಪಿಯವರನ್ನು ಹೊರತುಪಡಿಸಿ ಬೇರೆ ಯಾರಿಗೂ ಸಾಲ ಕೊಟ್ಟಿರುವುದಿಲ್ಲ. ಬೇರೆಯವರಿಗೆ ಸಾಲಕೊಟ್ಟಿದ್ದು ಅದರ ಬಗ್ಗೆ 2 ಕೇಸು ಹಾಕಿದು ಒಂದು ಮುಗಿದು ಹೋಗಿರುತ್ತದೆ. ಅದರ ಮೊತ್ತ ನನಗೆ ನೆನಪಿರುವುದಿಲ್ಲ. ಶ್ರವಣಬೆಳಗೊಳದ ಜಗದೀಶರವರಿಗೆ ಹಣವನ್ನು ಕೊಟ್ಟಿರುತ್ತೇನೆ. ಅದು 2 ವರ್ಷಗಳ ಹಿಂದೆ ಮುಗಿದು ಹೋಗಿರುತ್ತದೆ. ಆರೋಪಿಗೆ ಸಾಲವನ್ನು ಬ್ಯಾಂಕ್ ಮೂಲಕ ನೀಡಲು ತೊಂದರೆ ಇರಲಿಲ್ಲವೇ

ಎಂದರೆ ಸರಿ ನಗದು ಇದ್ದರಿಂದ ಕೊಟ್ಟಿರುತ್ತೇನೆ. ನನ್ನ ಖಾತೆ ನಂಬರ್ ಗೊತ್ತಿಲ್ಲ. 12.03.2018 ರಂದು 64082197027 ಈ ಖಾತೆಗೆ 20200/- ರೂಗಳನ್ನು ಹಾಕಿರುತ್ತಾರೆ ಎಂದರೆ ಸರಿ. 11.09.2018 ರಂದು corporation ಖಾತೆಗೆ 12490 ಇದಕ್ಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯು ಫೋನ್ ಪೇ ಅಲಿಲ 25ಸಾವಿರ ರೂಗಳನ್ನು ಹಾಕಿರುತ್ತಾರೆ ಎಂದರೆ ನನಗೆ ನೆನಪಿಲ್ಲ. ನನ್ನ ಫೋನ್ ನಂಬರ್ 9141447768 .

ಈ ಹಂತದಲ್ಲಿ ಹೆಚ್ಚಿನ ವಿಚಾರಣೆಗೆ ಕಾಲಾವಕಾಶ ನೀಡಲಾಯಿತು.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ ಕೇಳಿ ಸರಿಯಾಗಿದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ಚನ್ನರಾಯಪಟ್ಟಣ